# ನೀವು ಕೇಳಿದಿರಿ?

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಚುನಾವಣೆಯಲ್ಲಿ ಸೋತ ರಾಜಕಾರಣಿಗೂ, ಪರೀಕ್ಷೆಯಲ್ಲಿ ಫೇಲಾದ ಸ್ಟೂಡೆಂಟಿಗೂ ವ್ಯತ್ಯಾಸ?



ಮರುಪರೀಕ್ಷೆಗೆ ಅದೇ ಸಿಲಬಸ್; ಮರುಚುನಾವಣೆಗೆ ಸಿಲಬಸ್ ಛೇಂಜ್!

ಎಚ್.ಆರ್. ದೇಸಾಯಿ, ರಾಯಚೂರು
ಮದುವೆ ಸಮಯದಲ್ಲಿ ಕನ್ಯಾ ಮಾಡಿಕೊಂಡಷ್ಟು ಶೃಂಗಾರವನ್ನು ವರ ಏಕೆ ಮಾಡಿಕೊಳ್ಳುವುದಿಲ್ಲ?
ಪಾಲಿಷ್ ಮಾಡಿದರೆ ಕಣ್ಣು ಕುಕ್ಕುವಂತಾಗುವುದು ಚಿನ್ನ ಮಾತ್ರ, ಕಬ್ಬಿಣವಲ್ಲ.

ನಾಜ್ಯೋತಿ, ಹೂವಿನಹಡಗಲಿ
ಸಕ್ಕರೆ ಕಾಯಿಲೆ ಇರುವವರಿಗೂ, ಕನ್ನಡ ಭಾಷಿಕರಿಗೂ ಒಂದು ಸಾಮ್ಯತೆ ಇದೆ. ಏನದು ರಾಮ್‌ಜೀ?
ಭಾಷಣಗಳ ಮಧ್ಯದಲ್ಲಿ ಆಗಾಗ್ಗೆ ಸಭೆಯಿಂದ ಹೊರಹೋಗುವುದು.

ರಮೇಶ್, ಹನುಮನಾಳು
ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರುತ್ತಂತೆ. ಮೊದಲನೆಯದೋ, ಎರಡನೆಯದೋ?



ಯಾವುದು ನಿಮ್ಮಲ್ಲಿ ಸ್ವರ್ಗಸ್ಥರಾಗಬೇಕೆಂಬ ಬಯಕೆ ಮೂಡಿಸುತ್ತದೋ ಅದು.

ಎಸ್ಸೆನ್ಕೆ, ಕಡೂರು
ಕತ್ತೆಹಾಲು ಕುಡಿದವರು ಬುದ್ಧಿವಂತರಾಗುತ್ತಾರಂತೆ. ನೀವು ಕತ್ತೆಹಾಲು ಕುಡಿದಿರುವಿರೇನು?
ಇಂದಿನವರೆಗೆ ನನಗೆ ಒಂದಾದರೂ ಬುದ್ಧಿವಂತ ಕತ್ತೆಮರಿ ಕಂಡಿಲ್ಲವಾದ್ದರಿಂದ, ಕುಡಿಯಲಿಲ್ಲ.

ನಾರಾಯಣ ಯಾಜಿ, ಶಿರಾಲಿ
ಬಲಗೈಗೆ ಮಾರಣಾಂತಿಕ ಕಾಯಿಲೆ, ಒಂದು ಕಾಲು ದುರ್ಬಲ, ಇನ್ನೊಂದು ಹಟಮಾರಿ. ಇಂತಹ ಬಡರೋಗಿಯ ಪಾಡೇನು?
ಅವನದಂತಿರಲಿ. ಇಷ್ಟೊಂದು ಕ್ರೌರ್ಯ ಒಟ್ಟಾಗಿ ಕಲ್ಪಿಸಿಕೊಂಡ ನಿಮಗೆ 'ಚಾನಲ್ಸ್ ಭೀಭತ್ಸ ಅವಾರ್ಡ್' ಖಚಿತ.

ಅಮರಯ್ಯಾ ಪತ್ರಿಮಠ, ಸುರಪುರ
ದೀಪಾವಳಿಗೆ ಹೆಣ್ಣು ಕೊಟ್ಟ ಮಾವನ ಮನೆಗೆ ಅಳಿಯ ಹೋಗುವ ಅವಶ್ಯಕತೆ ಏನಿದೆ?
ಮಗಳು ಹೋಗಲೇಬೇಕಲ್ಲ; ಲ್ಯಾಪ್‌ಟಾಪ್ ಜೊತೆಜೊತೆಗೆ ಚಾರ್ಜರ್ರೂ ಹೋಗುವುದು ಸಮ್ಮತ ಕ್ರಮ.

ಗಂಜಾಂ ನಾಗರಾಜ, ಮೈಸೂರು
ವಿದ್ಯೆ ಮುಗಿದ ನಂತರ ವಿದೇಶಕ್ಕೆ ಹಾರಿಹೋಗುವ ಮಕ್ಕಳಿಂದ ನಮ್ಮ ದೇಶಕ್ಕಾಗುವ ಪ್ರಯೋಜನವೇನು?
ಯೋಗ್ಯರಾದರೆ ದೇಶಕ್ಕೆ ಕೀರ್ತಿ; ಅಯೋಗ್ಯರಾದರೆ ದೇಶಕ್ಕೆ ಅಷ್ಟು ಸ್ವಾರ್ಥಿಗಳ ಭಾರ ತಗ್ಗಿತಲ್ಲ.

ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ
ಗುಡಿ ಚಿಕ್ಕದು. ಪ್ರವೇಶದ್ವಾರ ದೊಡ್ಡದೇಕೆ?
ಪ್ರಸಾದದ ಟೇಬಲ್ ಇಟ್ಟುಕೊಳ್ಳಲು; ಭಕ್ತಿ ಎಂತಾದರೂ ಇರಲಿ, ಪ್ರಸಾದಭುಕ್ತಿಗೆ ಕ್ಯೂ ದೊಡ್ಡದೇ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಲೋಕದ ಡೊಂಕನ್ನು ತಿದ್ದುವವರು ಯಾರು?
ಸಂಬಂಧಿತ ಮೇಕಪ್ ಮ್ಯಾನ್‌ಗಳು.

ಮಹಾವೀರ ಕಾಸರ, ಶಿವಮೊಗ್ಗ
ಸಮಸ್ಯೆಗಳನ್ನರಿಯಲು ಆರೋಗ್ಯ ಸಚಿವರು ಆಸ್ಪತ್ರೆಯಲ್ಲಿ ವಾಸ್ತವ್ಯ ಹೂಡಿದರೆ, ಬಂದೀಖಾನೆ ಸಚಿವರು ಏನು ಮಾಡಬೇಕು?
ಏನೇನೂ ಇಲ್ಲ. ಮುಂಚೆಯೇ ಅದನ್ನೆಲ್ಲ ಕಂಡಿರುವುದು ಸಚಿವರಾಗುವುದಕ್ಕೆ ಕ್ವಾಲಿಫಿಕೇಷನ್.

ವಿ. ಹಮೀದ್, ವಿಟ್ಲ
ಕಾರ್ಯಕ್ರಮವಿದೆ ಎಂದು ಹೇಳಿ ಸ್ಟೆನೋ ಸಂಗಡ ಸಿನಿಮಾಕ್ಕೆ ಹೋದಾಗ ಮಧ್ಯಂತರದಲ್ಲಿ ಬಾಸ್ ಸಿಕ್ಕಿದರೆ...?
ಸ್ಟೆನೋ ಬಾಸ್ ಜೊತೆ ಹೋಗುತ್ತಾರೆ. ನೀವು ನಿಮ್ಮ ಹಾದಿ ನೋಡಿಕೊಳ್ಳಿ.

## ಬಹುಮಾನಿತ ಪ್ರಶ್ನೆ

ಕೃಷ್ಣಪ್ರಸಾದ್, ಬೆಂಗಳೂರು
ಗಂಡಹೆಂಡಿರ ಜಗಳ ಉಂಡು ಮಲಗುವ ತನಕವೆನ್ನುತ್ತಾರೆ. ಆದರೆ ಒಂದು ಜೋಡಿ 25 ವರ್ಷಗಳಿಂದ ಮಾತಾಡಿಲ್ಲವಂತಲ್ಲಾ...?
ಅಪರೂಪದ ಅತ್ಯದ್ಭುತ ಹೊಂದಾಣಿಕೆ! 'ಆದರ್ಶ ದಂಪತಿ' ಪ್ರಶಸ್ತಿಗೆ ಅರ್ಹರವರು.

ಮುಕುಂದ ಹೆರಕಲ್ಲ, ಬೆಂಗಳೂರು
ಆಘಾತಕರ ಸುದ್ದಿ ಕೇಳಿದಾಗಲೆಲ್ಲ 'ಅಯ್ಯೋ ರಾಮ' ಎನ್ನುತ್ತಾರೆ. 'ಅಯ್ಯೋ ಕೃಷ್ಣ' ಎಂದೇಕೆ ಅನ್ನುವುದಿಲ್ಲ?
ಕೃಷ್ಣನದು ಎಲ್ಲವೂ ಪ್ಲ್ಯಾನ್ಡ್. ರಾಮನೇ ಆಘಾತಗಳನ್ನು ಅನುಭವಿಸಿ, ಎದುರಿಸಿ, ಗೆದ್ದವನು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಕಪ್ಪುಬಟ್ಟೆಗೂ, ಅಪರಾಧಿಗಳನ್ನು ಬಂಧಿಸಿದಾಗ ಹಾಕುವ ಕಪ್ಪು ಮುಸುಕಿಗೂ ಸಂಬಂಧವಿದೆಯೆ?
ಎರಡೂ ತಮೋಸೂಚಕವೇ; ಕುರುಡುತನ ತೋರಿಸಲು ಪಟ್ಟಿ; ಕರಾಳಮನ ಸೂಚಿಸಲು ಮುಸುಕು!

ಟಿ.ಎಂ. ಮಾನಪ್ಪ, ಶಿವಮೊಗ್ಗ
ವೈದ್ಯನಿಗೂ, ದರ್ಜಿಗೂ ವ್ಯತ್ಯಾಸವೇನು?



ದರ್ಜಿ ಲೇಟ್ ಮಾಡಿದರೆ ವ್ಯಕ್ತಿಗೆ ಡ್ರೆಸ್ ಇರಲ್ಲ. ವೈದ್ಯ ಲೇಟ್ ಮಾಡಿದರೆ ವ್ಯಕ್ತಿ ಅಡ್ರೆಸ್ಸೇ ಇರಲ್ಲ.

ಬಿ. ಬೋರೇಗೌಡ, ಸರಸ್ವತಿಪುರ
ಈ ದೇಶವೇ ಕಳ್ಳರ ದೇಶ ಅಲ್ವಾ ಗುರುದೇವಾ?
ಅಡ್ಡಬಿದ್ದೆ ಗುರುವೆ. ನಿಮ್ಮಷ್ಟು ಸುಲಭವಾಗಿ ಯಾರೂ ತಾವು ಕಳ್ಳರೆಂದು ಒಪ್ಪಿಕೊಂಡಿರಲಿಲ್ಲ.

ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಇಂದು ದೇವನಲ್ಲಿ ಜನರ ಭಕ್ತಿ ಹೆಚ್ಚಿದೆ. ಯಾಕೆ?
ತಮ್ಮ ಕೇಡುಬುದ್ಧಿಯಿಂದ ಕುಂಭೀಪಾಕ ಸೇರಿಬಿಟ್ಟೇವೆಂಬ ಭಯವಿದೆ, ಅದಕ್ಕೇ.

■ ರಾಮ್